ತಿರುಗಿ ಸೊಂಟ ಬಿದ್ದು ಹೋಗುತ್ತೆ. ನಂಗೇನು ಹೊಸ್ತಾಗಿ ಪ್ರಾಯ ಬರುತ್ತಾ?" ಅಂದಳು ಮತ್ತೊಂದು ದಿನ. ಎಲ್ಲಕ್ಕೂ ಒಂದು ಕಾಲ, ಒಂದು ವಯಸ್ಸು ಅನ್ನುವುದು ಇರುತ್ತದೆಯಲ್ಲವಾ? ಗಂಡ, ಹೆಂಡತಿ ಬೆಳಿಗ್ಗೆ ಹೊರಟರೆ ಮನೆ ಸೇರುವುದು ರಾತ್ರಿ. ಪಾಪ, ಸೀತೆಗೂ ಸಾಕುಸಾಕಾಗಿ ಹೋಗುತ್ತದೆಯೇನೋ ಅನಿಸಿ 'ಅಯ್ಯೋ...' ಅಂದುಕೊಂಡಿದ್ದರು ಭಟ್ಟರು. ಒಂದು ಕಡೆ ಮೊಮ್ಮಗನ ವಾಂಛಲ್ಯ, ಮತ್ತೊಂದು ಕಡೆ ಎಲ್ಲವನ್ನೂ ನಿಭಾಯಿಸಲಾಗದ ದೌರ್ಬಲ್ಯ. ಅಡಕತ್ತರಿಯಲ್ಲಿ ಸಿಕ್ಕಿಕೊಂಡಿದ್ದಾಳಾ ಸೀತೆ? ಅವಳಂತಾ ತಾಯಂದಿರ ದುಡಿಮೆ ಅಂದರೆ ಕೃತಜ್ಞತೆ ತೋರಿಸಬೇಕಿಲ್ಲದ ಮಾಮೂಲಿ ಕೆಲಸ ಅನ್ನಿಸಿಬಿಡುತ್ತದೆಯಾ?

*****

ಮಗಳ ಮನೆಯಲ್ಲಿ ಲೆಕ್ಕ ಮಾಡಿದ ಹಾಗೆ ನಾಲ್ಕು ದಿನ ಇದ್ದು ಮರಳಿ ಹಳ್ಳಿಗೆ ಬಂದ ಭಟ್ಟರಿಗೆ ಹೊಸ ಸುದ್ದಿ ಕಾದಿತ್ತು. "ಶೀನಪ್ಪಯ್ಯನಿಗೆ ಚೀಟಿ ಬಂದಾಯ್ತು..." ಅಂದಿದ್ದಳು ಸೀತೆ.

"ಹೌದನೇ? ಏನಾಗಿತ್ತಂತೆ? ನಂಗಿಂತಾ ಏಳೆಂಟು ವರ್ಷ ಸಣ್ಣೋನಲ್ಲೇ ಮಾರಾಯ್ತೀ..."

"ನಿಂಗೊತ್ತಲ್ಲ, ಎಲ್ಲಿ ಊಟದಮನೆ ಎದ್ರೂ ಗಿರಾಕಿ ಹೊರಟುಬಿಡ್ತಿದ್ದ. ಎಲ್ಲೋ ಸಮಾ ಉಂಡು ಬಂದಿದಾನೆ. ಅಜೀರ್ಣದ ಭೇದಿಗೆ ಯಾರಾರೂ ಸಾಯ್ತಾರೆ ಅಂದ್ರೆ ನಂಬೋಕಾಗುತ್ತಾ? ಮನೆ ಔಸ್ತಿ ಮಾಡ್ತಾ ಕಾಲಹರಣ ಮಾಡಿದ್ರಂತೆ. ಹೆಂಡ್ತಿ ಇದ್ದಿದ್ರೆ ಜೋಪಾನ ಮಾಡ್ತಿದ್ಲು. ಮತ್ತ್ಯಾರಿಗೆ ಬೇಕಾಗಿದೆ ಹೇಳು..."

**ಸೀತೆಯ ಹತ್ತಿರ ಕೂಡಾ ಅಳಿಯ ತಮ್ಮೊಂದಿಗೆ ನಡೆದುಕೊಳ್ಳುವ ರೀತಿಯ ಕುರಿತು ಭಟ್ಟರು ತುಟಿ ಒಡೆದಿಲ್ಲ. ಹತ್ತಿರದವರ ಹುಳುಕುಗಳನ್ನು ಮುಚ್ಚಿಟ್ಟು ಅವರನ್ನು ಒಪ್ಪಿಟ್ಟುಕೊಳ್ಳುವುದು ಅನೇಕರ ಜಾಯಮಾನ ಆಗಿರಬಹುದಾ? ತಮ್ಮಂತೆ? ಸುಖವಾಗಿದ್ದೇವೆಂದು ತೋರ್ಪಡಿಸಿಕೊಳ್ಳುವುದೂ ಕೂಡಾ ಒಂದು ದೌರ್ಬಲ್ಯ ಇರಬಹುದಾ?**

ಅವತ್ತು ಸಂತರ್ಪಣೆಮನೆಯಲ್ಲಿ ಸಿಕ್ಕಿದ ಶೀನಪ್ಪಯ್ಯ ಹೇಳಿದ ಮಾತು ಅವನ ವಿಷಯದಲ್ಲೇ ಸತ್ಯವಾಗಿಬಿಟ್ಟಿದೆ. ಒಂದು ಮಾತ್ರೆಯಲ್ಲಿ ಸುಧಾರಣೆಯಾಗಬಹುದಾದ್ದು ನಿರ್ಲಕ್ಷ್ಯದ ಕಾರಣದಿಂದ ಜೀವವನ್ನೇ ತೆಗೆದಿದೆ. 'ಆಯುಷ್ಯ ಮುಗಿದಿದ್ರೆ ಏನು ಮಾಡಿದ್ರೂ ಅಷ್ಟೇ...' ಎಂದು ತಿಪ್ಪೆ ಸಾರಿಸುವುದಕ್ಕೆ ಏನಾಗಬೇಕಿದೆ? ಇನ್ನು ಗಡದ್ದಾಗಿ ತಿಥಿಕರ್ಮ ಮಾಡಿ, ದಾನಧರ್ಮ ಕೊಟ್ಟು, ವೈಕುಂಠಸಮಾರಾಧನೆ ಹುಡಿ ಹಾರಿಸಿ, "ಮಕ್ಕಳು ಅಂದರೆ ಹೀಗಿರಬೇಕಯ್ಯಾ..." ಎಂದು ಹೊಗಳಿಕೆ ಹಾಕಿಸಿಕೊಂಡು ಬಿಡುತ್ತಾರೆ. ಇದ್ದಾಗ ಚೆನ್ನಾಗಿ ನೋಡಿಕೊಳ್ಳದೆ ಸತ್ತ ಮೇಲೆ ಏನು ಮಾಡಿ ಏನು ಫಲ? 'ಮುದುಕರನ್ನ ಕಂಡ್ರೆ ಎಲ್ರಿಗೂ ಸಸಾರ' ಅಂದಿದ್ದ ಪುಣ್ಯಾತ್ಮ. ಅನುಭವ ಅವನಿಂದ ಅಂತಾ ಮಾತಾಡಿಸಿರಬೇಕು. 'ಸತ್ಯ ಹೇಳುವುದಕ್ಕೂ ಧೈರ್ಯ ಇರಬೇಕು' ಅನಿಸುತ್ತಿದೆ ಭಟ್ಟರಿಗೆ. ತಮ್ಮ ಅಳಿಯ ಮತ್ತೆಂತವನು? ನಾಳೆ ತಮಗೇನಾದರೂ ಕಾಯಿಲೆಕಸಾಲೆ ಆದರೆ,